KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/ SSL-398/2021-22/156

Date: 14 MAY 2022

ಸುತ್ತೋಲೆ

ವಿಷಯ: AECC ಯಂತೆ ಪರಿಸರ ಅಧ್ಯಯನವು ಭೂಗೋಳಶಾಸ್ತ್ರ, ಭೂವಿಜ್ಞಾನ, ಜೈವಿಕ ವಿಜ್ಞಾನ ಅಥವಾ ರಾಸಾಯನ ವಿಜ್ಞಾನದ ಶಿಕ್ಷಕರು ಬೋಧನೆ ಮಾಡುವ ಕುರಿತು.

ಉಲ್ಲೇಖ: 1. ದಿ: 19.08.2021 ರಂದು ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ.
2. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 13-05-2022

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕ.ವಿ.ವಿ. ಅಧೀನದ / ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, 2021–22ನೇ ಸಾಲಿನಿಂದ NEP ಮಾದರಿಯ 2ನೇ ಸೆಮಿಸ್ಟರ್‌ಗೆ ಅಳವಡಿಸಿಕೊಂಡಿರುವ ಕಡ್ಡಾಯ AECC ಯಾದ ಪರಿಸರ ಅಧ್ಯಯನ (Environmental study)ವು UGC ಪಠ್ಯಕ್ರಮದ ಮಾದರಿಯಿಂದ ಅಳವಡಿಸಿಕೊಂಡಿರುವುದರಿಂದ ಸದರಿ ವಿಷಯದಲ್ಲಿ ವಿಜ್ಞಾನ ವಿಷಯಗಳನ್ನೊಳಗೊಂಡ ಪಠ್ಯಕ್ರಮವಿರುತ್ತದೆ. ಆದ್ದರಿಂದ, ಉಲ್ಲೇಖ 01 ರಂತೆ ದಿನಾಂಕ 19.08.2021 ರಂದು ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯದ ಪ್ರಕಾರ ಭೂಗೋಳಶಾಸ್ತ್ರ (Geography), ಭೂವಿಜ್ಞಾನ (Earth Science), ಜೈವಿಕ ವಿಜ್ಞಾನ (Biological Science) ಅಥವಾ ರಾಸಾಯನ ವಿಜ್ಞಾನ (Chemical Science)ದ ಶಿಕ್ಷಕರು ಮಾತ್ರ ಬೋಧನೆ ಮಾಡುವದೆಂದು ನಿರ್ಣಯಿಸಲಾಗಿದೆ.

ಆದ್ದರಿಂದ, ಪರಿಸರ ಅಧ್ಯಯನ (Environmental study) ವಿಷಯವನ್ನು ಬೋಧಿಸಲು ಈ ಮೇಲಿನಂತೆ ಸಂಬಂಧಿಸಿದ ಪ್ರಾಧ್ಯಾಪಕರಿಗೆ ತಿಳಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು, ಪರಿಸರ ಅಧ್ಯಯನ ವಿಷಯವು ಗರಿಷ್ಠ 50 ಅಂಕಗಳನ್ನೊಳಗೊಂಡಿದ್ದು ಶೇ. 60 ರಷ್ಟು ಅಂದರೆ 30 ಅಂಕಗಳಿಗೆ ಸೆಮಿಸ್ಟರ್‌ನ ಕೊನೆಯಲ್ಲಿ ಬಹು ಆಯ್ಕೆ ಮಾದರಿಯಂತೆ (MCQ) ಪರೀಕ್ಷೆ ಜರುಗಿಸಲಾಗುವುದು.

ಕುಲಸಚಿವರು 13/5

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ. (ಕ.ವಿ.ವಿ. ಅಂರ್ತಜಾಲ ಹಾಗೂ ಮಿಂಚಂಚೆ ಮೂಲಕ ಬಿತ್ತರಿಸಲಾಗುವುದು)
2. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರತಿ:

1. ವಿತ್ತಾಧಿಕಾರಿಗಳು, ಕ.ವಿ.ವಿ ಧಾರವಾಡ.
2. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.